ಪಾಠ- ೮

## ಸಂಕ್ರಾಂತಿ

ಮೌಲ್ಯ: ಒಂದೊಂದು ಹಬ್ಬದಲ್ಲು ಒಂದೊಂದು ವಿಶೇಷತೆ ಇರುತ್ತದೆ.

---

### ಪದಗಳ ಅರ್ಥ

1.ಬೀರು - ಹಂಚು, ವಿತರಿಸು.
2.ಕಂತೆ - ಕಟ್ಟು
3.ಕೇರಿ - ಓಣಿ
4.ಕಿಚ್ಚು - ಬೆಂಕಿ
5.ಜೋಡಿ - ಜೊತೆ.

---

ಅ) ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸು.

೧) ತಂಗಿಯು ಯಾವ ಲಂಗ ಹಾಕಿಕೊಂಡಿದ್ದಳು ?
ಉ : ತಂಗಿಯು ಗರಿಮುರಿ ಜರತಾರಿ ಲಂಗ ಹಾಕಿಕೊಂಡಿದ್ದಳು.

---

೨) ಗೆಳತಿಯ ಜೊತೆ ತಂಗಿ ಕೇರಿಗೆ ಹೊರಟಿದ್ದು ಏಕೆ ?
ಉ : ಎಳ್ಳು, ಕಬ್ಬು, ಸಕ್ರೆ, ಅಚ್ಚು, ಬಾಳೆಹಣ್ಣು, ಬೆಲ್ಲ ಬೀರೊಕಂತ ತಂಗಿ ಗೆಳತಿಯ ಜೊತೆ ಹೊರಟ್ಟಿದ್ದಾಳೆ.

---

೩) ಅಪ್ಪ ದನಕರುಗಳಿಗೆ ಏನು ಕೊಟ್ಟರು ?
ಉ : ಅಪ್ಪ ದನಕರುಗಳಿಗೆ ಅಕ್ಕಿ-ಬೆಲ್ಲ-ಹಣ್ಣು ಕೊಟ್ಟರು.

---

೪) ಮಕ್ಕಳನ್ನು ಹಸೆಯಲ್ಲಿ ಕೂರಿಸಿ ಏನು ಮಾಡುವರು ?
ಉ : ಮಕ್ಕಳನ್ನು ಹಸೆಯಲ್ಲಿ ಕೂರಿಸಿ ಎಳ್ಳು-ಎಲಚಿ-ಅಚ್ಚು ಸುರಿಯುವರು.

---

೫) ಸಂಕ್ರಾಂತಿ ಪದ್ಯವನ್ನು ಬರೆದ ಕವಿಯ ಹೆಸರೇನು?
ಉ : ಸಂಕ್ರಾಂತಿ ಪದ್ಯವನ್ನು ಬರೆದ ಕವಿಯ ಹೆಸರು ಎಚ್.ಎಸ್.ವೆಂಕಟೇಶಮೂರ್ತಿ.

---

ಆ. 'ಅ' ಪಟ್ಟಿಯಲ್ಲಿರುವ ವಾಕ್ಯಗಳನ್ನು 'ಬ' ಪಟ್ಟಿಯಲ್ಲಿರುವ ವಾಕ್ಯಗಳೊಂದಿಗೆ ಹೊಂದಿಸಿ ಬರೆ.

| ಅ. | ಬ |
|---|---|
| ೧) ಗರಿಮುರಿ ಜರತಾರಿ | - ಲಂಗ ಹಾಕಿಕೊಂಡು |
| ೨) ಬೀರೋಕಂತ ಹೊರಟಿದ್ದಾಳೆ | -. ತಂಗಿ ಕೇರಿಗೆಲ್ಲ |
| ೩) ರಂಗೇನಳ್ಳಿ ರಂಗಿನ ಗೊಂಬೆ. | -. ಕಣ್ಣ ತುಂಬ ನೋಡಿ |
| ೪) ಕಿಚ್ಚನು ಹಾಯಿಸಿ ಕೊಡುವರು ಅಪ್ಪ. | -. ಅಕ್ಕಿ-ಬೆಲ್ಲ-ಹಣ್ಣು |
| ೫) ಸುರಿಯುವಾಗ ಅಮ್ಮ ಅಜ್ಜಿ. | -. ಮಕ್ಕಳಿಗಚ್ಚು ಮೆಚ್ಚು. |

---

### ಉಕ್ತಲೇಖನ

1.ಸಂಕ್ರಾಂತಿ
2.ಹಬ್ಬ
3.ಕಬ್ಬ
4.ಜರತಾರಿ
5.ಲಂಗ
6.ತಂಗಿ
7.ಗೊಂಬಿ
8.ಗೆಳತಿ
9.ಅಪ್ಪ
10.ಅಮ್ಮ

---